PART III—Section 3

NOTIFICATIONS RELATING TO LOCAL SELF-GOVERNMENT

OFFICE OF THE TAHSILDAR AND RETURNING OFFICER, TOWN MUNICIPAL COUNCIL, KANAKAPURA.

Dated 31st March 1974.

CORRIGENDUM

No T. M. C. ELN. 10/73-74. Notice of Corrections as detailed below are hereby published for the information of the public.

In the Notification dated 25th February 1974 published in the *Karnataka Gazette*, dated 21st February, 1974 in Part III and the daily Newspapers of Prajavani and Samyuktha Karnataka dated 25th February 1974, please read the corrections as follows in the schedule appended at item No. 11 therein.

Sl. No of polling station.	Division No.	Name of the polling Station.	Part No. of the Assembly constituency	List of voters attached to the polling station			
				From	To.	deletion	total
11	3	Office of the Assistant Elnoctional Officer (Rigot wing) Colony Road.	84	1	508	1 6	372

I SYED ABDUL SATTER,
Tahsildar and Returning Officer.

F. 13

ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ತಾಲ್ಲೂಕ್ ಅಭಿವೃದ್ಧಿ ಮಂಡಳಿ, ಹೊಸದುರ್ಗ.

(NOTICE ಜಾಹೀರ್ ಪ್ರಕಟಣೆ

ತಾ 15-12-1973.

ಹೊ. ಟಿ. ಡಿ. ಬಿ./ಎ. ಡಿ. ಎಂ./ಸಿಆರ್. 1 1970-71.

Notice is hereby given to the inhabitants of Hosadurga Taluk that the Talu Board Hosadurga at its meeting held on 21st November 1973 has passed the Resolution specified below under sub-section (3) of section 163 of the Karnataka Village Panchayats and Local Boards Act, 1959.

Any inhabitant of the Taluk objecting to the increasing the rate any within one month from the date of publication of this notice, send his objection in writing to the Taluk Board Hosadurga.

ಹೊಸದುರ್ಗ ತಾ ೂಕಿನ ಯಾವತ್ತು ರಹವಾಸಿಗಳಲ್ಲಿ ಈ ನೋಟೀಸಿನ ಮೂಲಕ ಜಾಹೀರ್ ಪಡಿಸುವುದೇನೆಂದರೆ —

ಮೈಸೂರು ಗ್ರಾಮ ಪಂಚಾಯತಕಾಯ್ದೆ ಕಲಂ 163 ಮತ್ತು ಅದರ ತಿದ್ದುಪಡಿ ಆರ್ಡಿನೆನ್ಸ್, 1969 ರನ್ವಯ ಪ್ರಾಪ್ತವಾದ ಅಧಿಕಾರದ ಪ್ರಯುಕ್ತ ಹೊಸದುರ್ಗ ತಾಲ್ಲೂಕ್ ಬೋರ್ಡಿನ ಕ್ಷೇತ್ರದಲ್ಲಿ ಆಕರಣೆಯಾದ ಭೂಕಂದಾಯದ ಮೇಲೆ ಪ್ರತಿ ರೂಪಾಯಿಗೆ 0-12 ಪೈಸೆಯಂತೆ ಆಕರಿಸಲ್ಪಡತ್ತಿದ್ದ ಲೋಕಲ್ ಸೆಸ್ಸ್‌ನ್ನು ಪ್ರತಿ ರೂಪಾಯಿಗೆ 0-25 (ಇಪ್ಪತ್ತೈದು) ಪೈಸೆಯಂತೆ ಹೆಚ್ಚಿಸ ಬೇಕೆಂದು ಬೋರ್ಡಿನ ಸಾಮಾನ್ಯ ಸಭೆ ತಾ॥ 21-11-1973ರಲ್ಲಿ ಶಿಫಾರಸ್ ಮಾಡಿ ತರಲು ಅನುಮೋದಿಸಿರುತ್ತೆ. [ಅನುಮೋದಿಸಿರುವ ನಕಲನ್ನು ಸಾರ್ವಜನಿಕರ ಅವಲೋಕನೆಗಾಗಿ ಈ ಕೆಳಗೆ ಕೊಡಲಾಗಿದೆ].

ಈ ಬಗ್ಗೆ ಯಾರಾದಾದರೂ ತಕರಾರ್ ಇದ್ದಲ್ಲಿ ಅದನ್ನು ಸದರಿ ನೋಟೀಸ್ ಪ್ರಥಮವಾಗಿ ಜಾಹೀರಾದ ತಾರೀಖಿನಿಂದ 30 (ಮೂವತ್ತು) ದಿನಗಳಲ್ಲಿ ಲೇಖ ಮೂಲಕ ಬೋರ್ಡಿನ ಕಛೇರಿಯಲ್ಲಿ ಈ ಕೆಳಗೆ ಸಹಿಮಾಡಿದವರ ಸಮಕ್ಷಮ ಹಾಜರ್ ಪಡಿಸತಕ್ಕದ್ದು. ಅವಧಿ ಮೀರಿದ ನಂತರ ಬರತಕ್ಕ ತಕರಾರುಗಳನ್ನು ಗಮನ್ ಕೊಡದೆ ತಿರಸ್ಕರಿಸಲಾಗುವುದು. ಹಾಗೂ ಸದರಿ ಲೋಕಲ್ ಸೆಸ್ಸಿನ ಹೆಚ್ಚಳವು [illegible] ಜಾರಿಯಲ್ಲಿ ಬರುವುದು ತಿಳಿಯುವುದು.

ಕೆ. ಕೃಷ್ಣಪ್ಪ,
ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು
ತಾಲ್ಲೂಕ್ ಅಭಿವೃದ್ಧಿ ಮಂಡಳಿ.

ತಾ॥ 21-11-1973 ನೇ ದಿವಸ ತಾ॥ ಅ॥ ಮಂಡಳಿಯ ಸಾಮಾನ್ಯ ಸಭೆಯು ಲೋಕಲ್ ಸೆಸ್ ಹೆಚ್ಚಳದ ಬಗ್ಗೆ ಕೈಗೊಂಡ ಠರಾವಿನ ನಕಲು—

ಆಕರಣೆಯಾದ ಭೂಕಂದಾಯದ ಮೇಲೆ ಪ್ರತಿರೂಪಾಯಿಗೆ 12 ಪೈಸೆಯಂತೆ ಆಕರಿಸಲ್ಪಡತ್ತಿದ್ದು ಲೋಕಲ್ ಸೆಸ್‌ನ್ನು ಪ್ರತಿರೂಪಾಯಿಗೆ 25 ಪೈಸೆಯಂತೆ ಹೆಚ್ಚಿಸಿ ಸರ್ಕಾರ ಈ ಹಿಂದೆ ಆಜ್ಞೆ ಹೊರಡಿಸಿರುವ ಪ್ರಕಾರ ಮೇಲ್ಕಂಡ ದರದಂತೆ ಲೋಕಲ್ ಸೆಸ್ಸ್‌ನ್ನು ವಸೂಲ್ ಮಾಡಲು ಸರ್ಕಾರದ ಮಂಜೂರಾತಿಯನ್ನು ಮಾಡಿ ನಡವಳಿಕೆಯನ್ನು, ಸರ್ಕಾರದ ನೋಟಿಫಿಕೇಷ್ ನಂ. DPC 21 BFX 72 ತಾ॥ 22-2-1973 ರಲ್ಲಿ ತಿಳಿಸಿರುವ ಪ್ರಕಾರ ಕ್ರಮ ತೆಗೆದು ಕೊಳ್ಳಲು ಜಿಲ್ಲಾಧಿಕಾರಿಗಳಿಂದ ಬಂದ ಪತ್ರವನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುವ ವಿಚಾರ.

ಗ್ರಾಮ ಪಂಚಾಯತಿ ಮತ್ತು ಲೋಕಲ್ ಬೋರ್ಡ್ ಕಲಮ್ಸು 131 (1)ರ ಪ್ರಕಾರ ಕಡ್ಡಾಯವಾಗಿ ತಾಲ್ಲೂಕ್ ಬೋರ್ಡ್ ತೆಗೆದುಕೊಳ್ಳಬಹುದಾದ ಕೆಲಸ ಕಾರ್ಯಗಳನ್ನು ಅಂದರೆ ಗ್ರಾಮಾಂತರ ರಸ್ತೆಗಳನ್ನು ಮಾಡಿಸುವುದು, ಮತ್ತು ದುರಸ್ತಿ ಪಡಿಸುವುದು, ನೀರಾವರಿ ಕಾಮಗಾರಿಗಳು ಪ್ರೈಮರಿ ಶಾಲಾಕಟ್ಟಡಗಳ ನಿರ್ಮಾಣ ಮತ್ತು ದುರಸ್ತಿ ಪಡಿಸುವುದು. ಕುಡಿಯುವ ನೀರಿನ ಬಾವಿಗಳನ್ನು ತೋಡಿಸುವುದು ಹಾಗೂ ದುರಸ್ತಿ ಪಡಿಸುವುದು ಗ್ರಾಮಾಂತರ ಜನಗಳಿಗೆ ವೈದ್ಯಕೀಯ ಸೌಲಭ್ಯ ಪದಗಿಸುವ ನಿಮಿತ್ತ ಆಯುರ್ ವೇದಿಕ್ ಆಸ್ಪತ್ರೆಗಳನ್ನು ನಡೆಸಿಕೊಂಡು ಹೋಗಲು ಮತ್ತು ಇನ್ನಿತರ ಸೌಲಭ್ಯಗಳನ್ನು ಪದಗಿಸಲು ಹಾಗೂ ಈಗಾಗಲೇ ಮೇಲ್ಕಂಡ ಎಲ್ಲಾಸೌಲಭ್ಯಗಳನ್ನು ಪದಗಿಸಿರುವ ಪ್ರಯುಕ್ತ ಈ ಬಾಬುಗಳಿಗೆ ಬೇಕಾಗುವ ಹೆಚ್ಚಿದ ಹಣವನ್ನು ಈಗಿನ ಅಲ್ಪಪರಮಾಸದಿಂದ ಪೂರೈಸುವುದು ಸಾಧ್ಯವಿಲ್ಲದ ಪ್ರಯುಕ್ತ ಸರ್ಕಾರವು ಲೋಕಲ್ ಫಂಡ್‌ಸೆಸ್ಸ್‌ನ್ನು ಜಾರಿಯಲ್ಲಿರುವ ಹನ್ನೆರಡು ಪೈಸೆಯಿಂದ (0-12) ಇಪ್ಪತ್ತೈದು (0-25) ಪೈಸೆಗೆ ಏರಿಸುವ ಬಗ್ಗೆ ಅಧಿಕಾರ ಕೊಟ್ಟಂತೆ 163 (2) ನೇ ಕಲಮು ಪ್ರಕಾರ ಅಂದರೆ ಪ್ರತಿರೂಪಾಯಿಗೆ ಹೆಚ್ಚಿಸ ಬೇಕೆಂದು ಸರ್ವಾನು ಮತದಿಂದ ತೀರ್ಮಾನಿಸಲಾಯಿತ್ತು. ತತ್ಪರಿಣಾಮವಾಗಿ ವರ್ಷ ಒಂದಕ್ಕೆ ಕನಿಷ್ಟ ರೂ. 15,000-00 ರೂಪಾಯಿಗಳ ಅಧಿಕ ಉತ್ಪನ್ನ ಬರಬಹುದೆಂದು ಭಾವಿಸಲಾಗಿದೆ.

ಕೆ. ಕೃಷ್ಣಪ್ಪ,
ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳು
ತಾ॥ ಅ॥ ಮಂಡಳಿ.

ಕೆ. ಆರ್. ಲಕ್ಷ್ಮಣ್,
ಮಾ॥ ಅಧ್ಯಕ್ಷರು

P5